## ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

## ಸಿ.ಸಿ. ನಂಃ 564/2019

**ಫಿರ್ಯಾಧಿದಾರರು ಃ ಕರ್ನಾಟಕ ಸರ್ಕಾರದ ಪರವಾಗಿ ಗುರುಮಿಠಕಲ್ ಪೋಲಿಸ ಠಾಣೆ**

**// ವಿರುದ್ಧ //**

**ಆರೋಪಿ ಹೆಸರು ಃ ರಮೇಶ ತಂದೆ ಬುಗ್ಗಪ್ಪ, ಸಾಃ ಜಲಾಲಪೂರ ಗ್ರಾಮ.**

**ದೋಷಾರೋಪಣೆ**

ನಾನು ಶ್ರೀಮತಿ ಅಸ್ರೀನಾ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂ. ಗಳು ಯಾದಗಿರಿ, ಈ ಕೆಳಗಿನ ಆರೋಪಿತರು.

| | |
|---|---|
| 1. | ರಮೇಶ ತಂದೆ ಬುಗ್ಗಪ್ಪ ಇದ್ದಿಲು, ವಃ 38 ವರ್ಷ,<br>ಸಾಃ ಜಲಾಲಪೂರ ಮಂಡಲ್ ನಾರಾಯಣಪೇಠ,<br>ತಾಃ ಮಕ್ತಲ್, ಜಿಃ ಮಹಿಬೂಬನಗರ (ಟಿ.ಎಸ್). |

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

**1.** ದಿನಾಂಕ 25.11.2018 ರಂದು ಬೆಃ 7-00 ಗಂಟೆ ಸುಮಾರಿಗೆ ಗುರುಮಿಠಕಲ್ ಠಾಣಾ ?ವ್ಯಾಪ್ತಿಯಲ್ಲಿ ಬರುವ ಪರಮೇಶಪಲ್ಲಿ ಗೇಟ್ ನಲ್ಲಿ ಆರೋಪಿತನಾದ ನೀನು ಸಾರ್ವಜನಿಕ ಸ್ಥಳದಲ್ಲಿ ಮಾನವನ ಜೀವಕ್ಕೆ ಹಾನಿಕಾರಕವಾದ ಸಿ.ಹೆಚ್. ಪುಡಿಯಿಂದ ತಯಾರಿಸಿದ ಹೆಂಡದ ಪಾಕೇಟಗಳನ್ನು ಅಕ್ರಮವಾಗಿ ಸಾರ್ವಜನಿಕರಿಗೆ ಕುಡಿಯಲು ಮಾರಾಟ ಮಾಡುತ್ತಿದ್ದು, ಈ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 273 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಮಾನವನು ಸೇವಿಸಿದರೆ ಜೀವಕ್ಕೆ ಹಾನಿಯುಂಟಾಗುವ ಹಾಗೂ ಮಾನವನ ಸೇವನೆಗೆ ಯೋಗವಲ್ಲದ ಸಿ.ಹೆಚ್. ಪುಡಿಯಿಂದ ತಯಾರಿಸಿದ ಹೆಂಡವನ್ನು ಮಾರಾಟ ಮಾಡುತ್ತಿದ್ದು, ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ. 284 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಒಟ್ಟು ನಾಲ್ಕು ಬಿಳಿ ಬಣ್ಣದ ಮಾಸಲಿ ಚೀಲಗಳಲ್ಲಿ 200 ಹೆಂಡದ ಪ್ಯಾಕೇಟುಗಳಲ್ಲಿ ಒಟ್ಟು 100 ಲೀ. ಹೆಂಡವನ್ನು ಅನಧಿಕೃತವಾಗಿ ಮಾರಾಟ ಮಾಡಲು ನಿನ್ನ ವಶದಲ್ಲಿ ಸಂಗ್ರಹಿಸಿ ಇಟ್ಟಿದ್ದು, ಈ ಮೂಲಕ ಆರೋಪಿತನಾದ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸರ್ಕಾರದಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಅನಧಿಕೃತವಾಗಿ ಹೆಂಡವನ್ನು ಸಾರ್ವಜನಿಕರಿಗೆ ಕುಡಿಯಲು ಮಾರಾಟ ಮಾಡುತ್ತಿದ್ದು, ಈ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿಲಾಯಿತು. ಆರೋಪಿಗೆ ಕನ್ನಡ ಭಾಷೆ ಬರುತ್ತಿರಲಿಲ್ಲ, ಆದ ಕಾರಣ ಶ್ರೀ ಎಸ್.ಕೆ ವಕೀಲರನ್ನು ಭಾಷಾಂತರ ಕಾರರನ್ನಾಗಿ ನೇಮಿಸಿ ತೆರೆದ ನ್ಯಾಯಾಲಯದಲ್ಲಿ ಭಾಷಾಂತರಕಾರರ ಮೂಲಕ ದೋಷಾರೋಪಣೆಯನ್ನು ಆರೋಪಿಗೆ ತೆಲುಗು ಭಾಷೆಯಲ್ಲಿ ಓದಿ ಹೇಳಲಾಯಿತು.)

**ದಿನಾಂಕಃ 14.12.2023**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.**